


ಕಾಶಿ ವಿಲಾಸಕ್ರಿಯಾಶಕ್ತಿ ದೇವರು ಹಂಪಿಯ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ ಮೂಲಪುರುಷ ಎನ್ನುವ ಸಂಗತಿ ನಿಜವಾಗಿಯೂ ಒಂದು ಅದ್ಭುತ ಸಂಗತಿಯಾಗಿದೆ. ಇದನ್ನು ವಿಜಯನಗರದ ಚಕ್ರವರ್ತಿ ಬುಕ್ಕದೇವರಾಯನ ಧರ್ಮಪತ್ನಿ ಪಟ್ಟದರಸಿ ಗಂಗಾದೇವಿ ತಾನು ರಚಿಸಿದ 'ಮಧುರೈ ವಿಜಯಂ'ನಲ್ಲಿ ಕಾಶಿ ವಿಲಾಸಕ್ರಿಯಾಶಕ್ತಿಯವರನ್ನು ಗುರುವಾಗಿ ಸ್ಮರಿಸಿದ್ದಾಳೆ. ಈ ವಾದಕ್ಕೆ ಅನೇಕ ಶಾಸನಗಳ ಬೆಂಬಲವೂ ಇದೆ. ವಿದ್ಯಾರಣ್ಯರು ವಿಜಯನಗರ ಸ್ಥಾಪಕರಲ್ಲ. ಶಂಕರಾಚಾರ್ಯ ಪರಂಪರೆಯಲ್ಲಿ 'ಕ್ರಿಯಾಶಕ್ತಿ' ಎಂಬ ಉಲ್ಲೇಖ ಬರುವುದಿಲ್ಲ. ಹಾಗಾಗಿ ವಿದ್ಯಾರಣ್ಯರು 'ಕ್ರಿಯಾಶಕ್ತಿ' ಪರಂಪರೆಗೆ ಸೇರಿದವರಲ್ಲ. ವಿದ್ಯಾರಣ್ಯರ ಕಾಲಘಟ್ಟ ಹಾಗೂ ವಿಜಯನಗರ ಸ್ಥಾಪನೆಯ ಕಾಲಘಟ್ಟ ಬೇರೆ ಬೇರೆ ಆಗಿತ್ತು ಎಂದು ಹೇಳುವಾಗ ಶಾಂತರಸರು ಬಳಸುತ್ತಿದ್ದ ಸಂಶೋಧನಾ ಪರಿಕರಗಳು ಅತ್ಯಂತ ನಿಖರವಾಗಿವೆ ಮತ್ತು ಪ್ರಾಮಾಣಿಕವಾಗಿವೆ.

ಆ ಕಾಲಘಟ್ಟದಲ್ಲಿದ್ದ ಕ್ರಿಯಾಶಕ್ತಿ ಪರಂಪರೆ ಅದು